# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1371 (1443)**
**ಸದಸ್ಯರ ಹೆಸರು** : **ಡಾ: ತಳವಾರ್ ಸಾಬಣ್ಣ**
**(ನಾಮನಿರ್ದೇಶನ ಹೊಂದಿದವರು)**

**ಉತ್ತರಿಸಬೇಕಾದ ದಿನಾಂಕ** : **20-03-2025**
**ಉತ್ತರಿಸುವ ಸಚಿವರು** : **ಮಾನ್ಯ ಮುಖ್ಯಮಂತ್ರಿಗಳು**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಪಧವೀಧರರ ಆಶಾಕಿರಣವಾಗಬೇಕಿದ್ದ ಕೆಪಿಎಸ್‌ಸಿ ಇಂದು ನೇಮಕಾತಿ ಮತ್ತು ಪರೀಕ್ಷೆಗಳನ್ನು ನಡೆಸುವಲ್ಲಿ ಆಗುತ್ತಿರುವ ವಿಳಂಬ ಮತ್ತು ಅಕ್ರಮಗಳಿಗೆ ಕಾರಣಗಳೇನು;</td><td rowspan="2">ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಕರ್ನಾಟಕ ಸರ್ಕಾರವು ರಚಿಸಿದ್ದ ಶ್ರೀ ಪಿ.ಸಿ. ಹೋಟಾ ಸಮಿತಿಯು ನೀಡಿರುವ ವರದಿಯ ಆಧಾರದ ಮೇಲೆ ನೇಮಕಾತಿಗಳಲ್ಲಿ ಪಾರದರ್ಶಕತೆಯನ್ನು ತರಲು ಗೋಪ್ಯ ಕಾರ್ಯಗಳನ್ನು ನಿರ್ವಹಿಸಲು ಒಂದು ಪರೀಕ್ಷಾ ನಿಯಂತ್ರಕರ ಹುದ್ದೆಯನ್ನು ಸೃಜಿಸಲಾಗಿರುತ್ತದೆ ಮತ್ತು ಸದರಿ ಹುದ್ದೆಯನ್ನು ಭಾರತೀಯ ಆಡಳಿತ ಸೇವೆಯ ಅಧಿಕಾರಿಯವರಿಂದ ಭರ್ತಿ ಮಾಡಲಾಗುತ್ತಿದೆ.<br>• ಆಯೋಗದಲ್ಲಿನ ಪರೀಕ್ಷಾ ನಿಯಂತ್ರಕರಿಗೆ ಹೆಚ್ಚಿನ ಕಾರ್ಯದ ಒತ್ತಡವಿದ್ದ ಹಿನ್ನೆಲೆಯಲ್ಲಿ ಆಯೋಗದಲ್ಲಿದ್ದ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ಜಂಟಿ ಪರೀಕ್ಷಾ ನಿಯಂತ್ರಕರ ಹುದ್ದೆಯೆಂದು ಪದನಾಮೀಕರಿಸಲಾಗಿರುತ್ತದೆ ಹಾಗೂ ಅಖಿಲ ಭಾರತ ಸೇವೆಯ ವೃಂದದ ಅಧಿಕಾರಿಯಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅಧಿಕಾರಿಗೆ ಗ್ರೂಪ್ 'ಸಿ' ವೃಂದದ ಪರೀಕ್ಷೋತ್ತರ ಕಾರ್ಯಗಳಲ್ಲದೆ ಇಲಾಖಾ ಪರೀಕ್ಷೆಗಳ ಪೂರ್ಣ ಗೌಪ್ಯ ಕಾರ್ಯಗಳನ್ನು ವಹಿಸಲಾಗಿರುತ್ತದೆ.<br>• ಆಯೋಗದಲ್ಲಿನ ಪರೀಕ್ಷಾ ಪೂರ್ವ ಮತ್ತು ಪರೀಕ್ಷೋತ್ತರ ಗೌಪ್ಯ ಕಾರ್ಯಗಳ ಮೇಲೆ ನಿಗಾ ವಹಿಸಲು, ಪಾರದರ್ಶಕತೆಯನ್ನು ಕಾಪಾಡಲು ಹಾಗೂ ಮಾಹಿತಿ ಸೋರಿಕೆಯನ್ನು ತಡೆಗಟ್ಟುವ ಸಲುವಾಗಿ ಗೌಪ್ಯ ಶಾಖೆಗಳಿಗೆ ಆಯೋಗದಲ್ಲಿ ಪ್ರತ್ಯೇಕವಾದ ಸ್ಥಳಾವಕಾಶವನ್ನು</td></tr>
<tr><td>ಆ</td><td>ಇಷ್ಟೆಲ್ಲಾ ಅಕ್ರಮಗಳು /ಹಗರಣಗಳು ನಡೆಯುತ್ತಿದ್ದರೂ ಸರ್ಕಾರ ಕ್ರಮವಹಿಸದಿರಲು ಕಾರಣಗಳೇನು;</td></tr>
</table>

| | | |
|---|---|---|
| ಇ | ಈ ಸಂಸ್ಥೆಯ ಮೇಲೆ ಹಗರಣಗಳು ಆಗುತ್ತಿದ್ದರು ಸರ್ಕಾರ ಕಠಿಣ ಕ್ರಮ ಕೈಗೊಂಡು ಸುಧಾರಣೆ ಮಾಡದಿರುವುದಕ್ಕೆ ಸಾವಿರಾರು ಉದ್ಯೋಗ ಆಕಾಂಕ್ಷಿ ಪದವೀಧರ ಯುವಕರ ಕನಸುಗಳನ್ನು ಸಾಕಾರಗೊಳಿಸಲು ಸರ್ಕಾರವೇ ನಿರ್ಲಕ್ಷ್ಯ ವಹಿಸುತ್ತಿದೆಯೆ; | ಕಲ್ಪಿಸಲಾಗಿದ್ದು, ಅಲ್ಲಿಗೆ ಅಧಿಕೃತ ವ್ಯಕ್ತಿಗಳನ್ನು ಹೊರತುಪಡಿಸಿ ಆಯೋಗದ ಇತರ ಅಧಿಕಾರಿ/ಸಿಬ್ಬಂದಿಗಳಾಗಲೀ ಹಾಗೂ ಇನ್ನಿತರ ವ್ಯಕ್ತಿಗಳ ಪ್ರವೇಶವನ್ನು ನಿರ್ಬಂಧಿಸಲು ಹಾಗೂ ಮೊಬೈಲ್ ಫೋನ್ ಕೊಂಡೊಯ್ಯುವುದನ್ನು ತಡೆಗಟ್ಟಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಹಾಗೂ 24*7 C.C.T.V. Surveillance ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br>• ಪರೀಕ್ಷೆ ನಡೆಯುವ ಮುನ್ನ ಪ್ರಶ್ನೆ ಪತ್ರಿಕೆ ಪರೀಕ್ಷಾ ಕೇಂದ್ರದಲ್ಲಿ ಸ್ವೀಕೃತವಾದ ಸಮಯದಿಂದ ಹಿಡಿದು ಪರೀಕ್ಷೆಗಳನ್ನು ಮುಗಿಸಿ ಪರೀಕ್ಷಾ ಸಾಮಾಗ್ರಿಗಳನ್ನು ಆಯೋಗಕ್ಕೆ ರವಾನಿಸುವರೆಗಿನ ಸಂಪೂರ್ಣ ಪ್ರಕ್ರಿಯೆಗಳನ್ನು Time Stamp ವಿಡಿಯೋಗ್ರಫಿ ಮಾಡಿಸಲಾಗುತ್ತಿದೆ. ಅಭ್ಯರ್ಥಿಗಳು ಪರೀಕ್ಷಾ ಬರೆಯುವ ಸಂದರ್ಭದಲ್ಲಿಯೂ ಎಲ್ಲಾ ಕೊಠಡಿಗಳಲ್ಲಿಯೂ ವಿಡಿಯೋಗ್ರಾಫರ್ ಮುಖಾಂತರ ವಿಡಿಯೋ ಚಿತ್ರೀಕರಣ ಮಾಡಿಸಲಾಗುತ್ತಿದೆ.<br>• ಅಭ್ಯರ್ಥಿಗಳು ಮೊಬೈಲ್, ಬ್ಲೂಟೂತ್ ಮತ್ತು ಇನ್ನಿತರೆ ಆಧುನಿಕ ಸಂವಹನ ಉಪಕರಣಗಳನ್ನು ಬಳಸಿ ದುರಾಚಾರ ಪ್ರಕರಣಗಳನ್ನು ಎಸಗುವುದನ್ನು ತಡೆಗಟ್ಟುವ ಸಲುವಾಗಿ ಪರೀಕ್ಷಾ ಉಪಕೇಂದ್ರಗಳಲ್ಲಿ ರೂಂ-ಜಾಮರ್‌ಗಳನ್ನು ಅಳವಡಿಸಲಾಗುತ್ತಿದೆ ಹಾಗೂ HHMD (Hand Held Metal Detector)ಯಂತ್ರದ ಸಹಾಯದಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಪ್ರತಿ ಅಭ್ಯರ್ಥಿಯ ಸಂಪೂರ್ಣ ತಪಾಸಣೆ ಮಾಡಿಸಲಾಗುತ್ತಿದೆ.<br>• ಆಯೋಗದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳ impersonation ತಪ್ಪಿಸುವ ಸಲುವಾಗಿ Face Recognization/ Bio-metric ಹಾಜರಾತಿ ತೆಗೆದುಕೊಳ್ಳುವ ಪದ್ಧತಿಯನ್ನು ಜಾರಿ ಮಾಡಲಾಗಿರುತ್ತದೆ.<br>• ಪರೀಕ್ಷೆಗೆ ಪ್ರತಿ ಅಭ್ಯರ್ಥಿಗಳಿಗೆ ವ್ಯಕ್ತಿಗತ (Personalised O.M.R) ಓ.ಎಂ.ಆರ್. ಹಾಳೆಗಳನ್ನು ಒದಗಿಸಲಾಗುತ್ತದೆ ಹಾಗೂ ಓ.ಎಂ.ಆರ್. ಹಾಳೆಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಒಂದು ಭಾಗದಲ್ಲಿ ಅಭ್ಯರ್ಥಿಗಳ ವಿವರಗಳನ್ನು ಮತ್ತು ಇನ್ನೊಂದು ಭಾಗದಲ್ಲಿ ಉತ್ತರಗಳ ಆಯ್ಕೆಗಳನ್ನು ಒಳಗೊಂಡಿರುತ್ತದೆ. ಸದರಿ ಭಾಗಗಳನ್ನು ಪರೀಕ್ಷಾ ಉಪಕೇಂದ್ರಗಳಲ್ಲಿಯೇ Perforation ಮಾಡಿ ಪ್ರತ್ಯೇಕಿಸಿ ಪ್ರತ್ಯೇಕ Tamper Evident Cover ನಲ್ಲಿರಿಸಿ ಸೀಲ್ ಮಾಡಿರುವ ಬಂಡಲ್‌ಗಳನ್ನು ಆಯೋಗದಲ್ಲಿ |

| | | |
|---|---|---|
| | | ಸ್ವೀಕರಿಸಲಾಗುತ್ತಿದೆ.<br>• ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ Radomization ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.<br>• ವಿಳಂಬವನ್ನು ತಡೆಗಟ್ಟಲು ನೇಮಕಾತಿಯ ವಿವಿಧ ಹಂತಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪರಿಶೀಲಿಸಲಾಗುತ್ತಿದೆ. ಉದಾ:CBT(Computer Based Test)/CBRT(Computer Based Recruitment Test) ಪರೀಕ್ಷೆಗಳನ್ನು ನಡೆಸಲು ಚಿಂತನೆ ನಡೆಸಲಾಗುತ್ತಿದೆ.<br>• ಇದಲ್ಲದೆ, ಕರ್ನಾಟಕ ಲೋಕಸೇವಾ ಆಯೋಗದ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ತಿದ್ದುಪಡಿ ಮಾಡಲು ಕ್ರಮವಹಿಸಲಾಗುತ್ತಿದೆ.<br>• ಕರ್ನಾಟಕ ಲೋಕ ಸೇವಾ ಆಯೋಗದ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಅಧಿನಿಯಮ, 1959ಕ್ಕೆ ತಿದ್ದುಪಡಿ ಮಾಡಲು ಕ್ರಮವಹಿಸಲಾಗುತ್ತಿದೆ. |
| ಈ | ಕೆಪಿಎಸ್‌ಸಿಯ ಅಧ್ಯಕ್ಷರು/ ಸದಸ್ಯರುಗಳ ನಡುವೆ ಸಮನ್ವಯವಿಲ್ಲದಿರುವುದು ಕಾರಣವೇ; ಈ ಬಗ್ಗೆ ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಆಯೋಗದಲ್ಲಿ ಈ ರೀತಿಯ ಪ್ರಕರಣಗಳು ಇರುವುದಿಲ್ಲ ಹಾಗೂ ಪರೀಕ್ಷೆ/ನೇಮಕಾತಿ ಪ್ರಕ್ರಿಯೆಗಳ ಮೇಲೆ ಯಾವುದೇ ಪರಿಣಾಮವಿರುವುದಿಲ್ಲ. |
| ಉ | ಕೆಪಿಎಸ್‌ಸಿಯ ಸುಧಾರಣೆಗಾಗಿ ಹೋಟಾ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ; ಇದರ ಸುಧಾರಣೆಗಾಗಿ ಕೇರಳ ಮಾದರಿಯಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಲು ಕ್ರಮವಹಿಸಲಾಗುವುದೇ? | ಕರ್ನಾಟಕ ಲೋಕಸೇವಾ ಆಯೋಗದ ಸುಧಾರಣೆಗಾಗಿ ರಚಿಸಲಾಗಿದ್ದ ಶ್ರೀ ಪಿ.ಸಿ ಹೋಟಾ ಸಮಿತಿಯು ಮಾಡಿರುವ ಬಹುತೇಕ ಶಿಫಾರಸ್ಸುಗಳನ್ನು ಈಗಾಗಲೇ ಜಾರಿಗೆ ತರಲಾಗಿರುತ್ತದೆ.<br><br>ಕೇರಳ ಲೋಕಸೇವಾ ಆಯೋಗದಲ್ಲಿ ಅನುಸರಿಸುತ್ತಿರುವ ನೇಮಕಾತಿ/ಪರೀಕ್ಷಾ ವಿಧಾನಗಳ ಬಗ್ಗೆ ಆಯೋಗದ ಸದಸ್ಯರುಗಳು ಮತ್ತು ಅಧಿಕಾರಿಗಳ ತಂಡವು ಭೇಟಿ ನೀಡಿ ಅಧ್ಯಯನ ನಡೆಸಿದ್ದು ಕೇರಳ ಲೋಕಸೇವಾ ಆಯೋಗದಲ್ಲಿ ನೇಮಕಾತಿ/ಪರೀಕ್ಷೆಗಳಲ್ಲಿ ಅನುಸರಿಸುತ್ತಿರುವ ಉತ್ತಮ ವಿಧಾನಗಳನ್ನು ಕರ್ನಾಟಕ ಲೋಕಸೇವಾ ಆಯೋಗದಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ: ಸಿಆಸುಇ 66 ಎಸ್‌ಎಲ್‌ಎ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**